6	ಬೆಂಗಳೂರು (ನಗರ)	ಯಲಪಂಕ (ಬೆಂಗಳೂರು ಉತ್ತರ) ಆನೇಕಲ್ ವರ್ತೂರು ವಿಧಾನ ಸಭಾ ಕ್ಷೇತ್ರ
7	ಕೋಲಾರ	ಮಾಲೂರು
8	ಮಂಡ್ಯ	ಮಳವಳ್ಳಿ, ಮದ್ದೂರು
9	ಧಾರವಾಡ	ಹುಬ್ಬಳ್ಳಿ (ಗ್ರಾಮಾಂತರ)
10	ಉತ್ತರ ಕನ್ನಡ	ಕಾರವಾರ ಸೂಪಾ

ಬಸವಕಲ್ಯಾಣದಲ್ಲಿ ಪಟ್ಟಣ ಸಹಕಾರಿ ಬ್ಯಾಂಕ್ ತೆರೆಯುವುದು

635 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಎಲ್ಲೆಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳನ್ನು ತೆರೆಯಲಾಗಿದೆ.*

ಆ) *ಬೀದರ್ ಜಿಲ್ಲೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಸಂಖ್ಯೆ ಎಷ್ಟು?*

ಇ) *ಬಸವ ಕಲ್ಯಾಣದಲ್ಲಿ ಪಟ್ಟಣ ಸಹಕಾರ ಬ್ಯಾಂಕು ತೆರೆಯಲು ಸರ್ಕಾರ ರಿಸರ್ವ್ ಬ್ಯಾಂಕಿನ ಅನುಮತಿ ಕೋರಿದೆಯೇ?*

ಈ) *ಹಾಗಿದ್ದಲ್ಲಿ ಯಾವಾಗ ಬಸವ ಕಲ್ಯಾಣದಲ್ಲಿ ಪಟ್ಟಣ ಸಹಕಾರ ಬ್ಯಾಂಕ್ನು ತೆರೆಯಲಾಗುವುದು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ರಾಜ್ಯದ ಪಟ್ಟಣ, ಅರೆ ಪಟ್ಟಣ ಪ್ರದೇಶಗಳಲ್ಲಿ ಒಟ್ಟು 223 ಪಟ್ಟಣ ಸಹಕಾರ ಬ್ಯಾಂಕುಗಳನ್ನು ನೋಂದಾಯಿಸಲಾಗಿದೆ.

ಆ) 3

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಬೈಲಹೊಂಗಲದಲ್ಲಿ ಪರತಂತ್ರ ಜೀವಿ ಪ್ರಯೋಗಲಯ ಕಟ್ಟಡ

631 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂ ಜಿಲ್ಲೆ ಬೈಲಹೊಂಗಲದ ಪರತಂತ್ರ ಜೀವಿ ಪ್ರಯೋಗ ಶಾಲೆ ಕಟ್ಟಡ ಕಟ್ಟುವ ಸಲುವಾಗಿ ಮನವಿಗಳು ಬಂದಿವೆಯೇ?*

ಆ) *ಹಾಗಿದ್ದಲ್ಲಿ, ಸರ್ಕಾರದವರು ಅಲ್ಲಿ ಪರತಂತ್ರಜೀವಿ ಪ್ರಯೋಗ ಶಾಲೆಯ ಕಟ್ಟಡ ಕಟ್ಟಲು ಯಾವ ಕ್ರಮ ಕೈಗೊಂಡಿರುವರು.*

ಇ) *ಕೃಷಿ ಇಲಾಖೆ ಅಧಿಕಾರಿಗಳು ನೀಡಿದ ಆದೇಶದ ಪ್ರಕಾರ ಭೂ ಸೇನಾ ನಿಗಮದವರು ಅಲ್ಲಿ ಕಟ್ಟಡ ಕಟ್ಟಲು ಅಂದಾಜು ವೆಚ್ಚ ಪತ್ರಿಕೆಯನ್ನು ತಯಾರಿಸಿದ ಸಂಗತಿ ನಿಜವೇ?*

ಈ) *ಭೂ ಸೇನಾ ನಿಗಮದವರು ತಯಾರಿಸಿದ ಅಂದಾಜು ವೆಚ್ಚ ಪತ್ರಿಕೆ ಪ್ರಕಾರ ಎಷ್ಟು ಹಣ ಬೇಕಾಗುವುದು.*

ಉ) *ಈ ಹಣವನ್ನು ಸನ್ 1993-94ನೇ ಸಾಲಿನಲ್ಲಿ ಅಥವಾ 1994-95ನೇ ಸಾಲಿನಲ್ಲಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):